International Journal of Kannada Research
www.kannadajournal.com

ISSN: 2454–5813
IJKR 2018; 4(2): 25-26
© 2018 IJKR
www.kannadajournal.com
Received: 09-02-2018
Accepted: 10-03-2018

**Dr. MB Katti**
Post-Doctoral Fellow (PDF)
Department of Kannada,
Gulbarga University Gulbarga,
Karnataka, India

**Correspondence**
**Dr. MB Katti**
Post-Doctoral Fellow (PDF)
Department of Kannada,
Gulbarga University Gulbarga,
Karnataka, India

# ದಲಿತ ಸಾಹಿತ್ಯ: ಮುಂದಣ ಹೆಜ್ಜೆ

## Dr. MB Katti

ಕನ್ನಡ ದಲಿತ ಸಾಹಿತ್ಯ ನಾಲ್ಕು ದಶಕಗಳನ್ನು ಪೂರೈಸಿದೆ. ಐದನೆಯ ದಶಕದಲ್ಲಿ ಪ್ರವಹಿಸುತ್ತಿದೆ. ಈ ನಲವತ್ತು ವರ್ಷಗಳ ದಲಿತ ಚಳವಳಿಯ ನಡೆಯಲ್ಲಿ 'ದಲಿತ ಚಳವಳಿ ಸತ್ತಿದೆ' ಎಂದು ಕೆಲವರು ಹೇಳುತ್ತಾರೆ. ಆದರೆ ಅದು ಸತ್ತಿಲ್ಲ ಎನ್ನುತ್ತಾರೆ ಅರವಿಂದ ಮಾಲಗತ್ತಿಯವರು. ಮಹೋನ್ನತವಾದ ಆಶೋತ್ತರಗಳು ಸುಲಭವಾಗಿ ಸಾಯುವುದೂ ಇಲ್ಲ. ಮತ್ತು ಸುಲಭವಾಗಿ ಸಾಧಿಸಲೂ ಬಿಡುವದಿಲ್ಲ. ಹಸಿದ ಒಡಲು, ಹಸಿದ ಮನ, ಹಸಿದ ಮೆದಳುಗಳು ಎಂದೂ ಚಳುವಳಿಯನ್ನು ಸಾಯಲು ಬಿಡುವದಿಲ್ಲ ಎನ್ನುತ್ತಾರೆ. ಅದಕ್ಕಾಗಿ ವರ್ತಮಾನದ ಸಂದರ್ಭದಲ್ಲಿ ಡಾ. ಬಾಬಾ ಸಾಹೇಬ ಅವರ ಚಿಂತನೆಗಳು ಸಮರ್ಥನೀಯವಾಗಿವೆ. ಅನ್ಯ ಚಿಂತನೆಗೆ ಸಂಘಟನಾ ಶಕ್ತಿಯನ್ನು ಕ್ಷೀಣಿಸದಂತೆ ನೋಡಿಕೊಳ್ಳುವ ಅರಿವು ನಮಗಿರಬೇಕಾಗುತ್ತದೆ. ಈ ಅರಿವಿಲ್ಲದ ದಲಿತ ಹೋರಾಟವು ಮಂದ ನಡಿಗೆಗೆ ನಾಂದಿಯಾಗುತ್ತದೆ. ದಲಿತ ಶಕ್ತಿಯ ಒಳರಾಜನೀತಿ ಮತ್ತು ದಲಿತೇತರ ಶಕ್ತಿಯ ಹೊರ ರಾಜನೀತಿ ಹೇಗಿರಬೇಕೆಂದು ಪರಸ್ಪರ ಗುರುತಿಸಿಕೊಂಡು ಯೋಜನಾ ಬದ್ಧವಾಗಿ ಚಲಿಸಿದ್ದೆ ಆದರೆ ಅಲ್ಲಿ ಯಶಸ್ಸು ಕಾಣಲು ಸಾಧ್ಯವಿದೆ. ಒಳರಾಜನೀತಿ ಹಾಗೂ ಹೊರ ರಾಜನೀತಿ ಪರಸ್ಪರ ಒಂದಾಗಿ ಹೋಗದೆ ನನ್ನ ದಾರಿ ನನಗೆ, ನಿನ್ನ ದಾರಿ ನನಗೆ ಎಂದು ಹೊರಟಿದ್ದೇ ಆದರೆ ಅದು ನೆಲೆ–ನೀತಿ ಇಲ್ಲದ ದಲಿತ ಹೋರಾಟದ ರಾಜನೀತಿ ಆಗುತ್ತದೆ. ಬಂಡಾಯ ಸಾಹಿತ್ಯದಿಂದ ಬೇರ್ಪಟ್ಟು ಸ್ವತಂತ್ರ ನೆಲೆ ಕಂಡುಕೊಂಡಿರುವ ದಲಿತ ಸಾಹಿತ್ಯ ತನ್ನ ಗುರಿ ತಲುಪಲು ತನ್ನದೇ ಆದ ಮಾರ್ಗಸೂಚಿಗಳನ್ನು ಅನುಸರಿಸಬೇಕಾಗುತ್ತದೆ ಬಂಡಾಯ ಚಳುವಳಿಯ ಆರಂಭದಲ್ಲಿಯೇ ಬರಗೂರು ರಾಮಚಂದ್ರಪ್ಪ ಅವರು ಇದನ್ನು ಹೀಗೆ ಸ್ಪಷ್ಟ ಪಡಿಸಿದ್ದಾರೆ. "ಸಾಹಿತ್ಯದ ಮಟ್ಟಿಗೆ, ಕೃತಿಯೊಂದರ ಅನುಭವ ಪ್ರಾಮುಖ್ಯದ ಆಧಾರದಿಂದ ಹುಟ್ಟಿನಿಂದ ದಲಿತರಾರವರು ಸೃಷ್ಟಿಸಿದ ಪ್ರಗತಿಪರ ಸಾಹಿತ್ಯವನ್ನು ದಲಿತ ಸಾಹಿತ್ಯವೆಂದು ಪರಿಗಣಿಸಬಹುದು. ಇದರರ್ಥ ಬೇರೆಯವರು ದಲಿತರ ಬಗ್ಗೆ ಬರೆದದ್ದು ಅಪ್ರಾಮಾಣಿಕ ಆಶಯಗಳಿಂದ ಕೂಡಿದೆ ಎಂದೇನೂ ಅಲ್ಲ. ಹುಟ್ಟಿನಿಂದಲೇ ದಲಿತನಾದವನ ಅಪ್ಪಟ ಅನುಭವ ಉಳಿದವರ ಅನುಭವಕ್ಕಿಂತ ಹೆಚ್ಚು ತೀವ್ರವಾದುದ್ದು. ರಕ್ತ ಮಾಂಸಗಳೊಂದಿಗೆ ಬೆರೆತ ಸಾಚಾ ಸ್ವರೂಪದ್ದು ಎಂದು ಇದರರ್ಥ. ಈ ನೆಲೆಯಲ್ಲಿ ಪ್ರಗತಿಪರ ಆಶಯಗಳು ಅಚ್ಚೊತ್ತಿದ ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯದ ಭಾಗವೇ ಆಗುತ್ತದೆ. ಏಕೆಂದರೆ ಪ್ರಗತಿಪರ ಆಶಯಗಳನ್ನು ಸ್ಫೋಟಿಸುವ ಯಾರೇ ಆದರೂ ಬಂಡಾಯ ಸಾಹಿತಿಗಳೆನಿಸುತ್ತಾರೆ. ಬಂಡಾಯ ಸಾಹಿತ್ಯ ಚಳುವಳಿಯ ಹುಟ್ಟಿನಿಂದ ದಲಿತರು ಮತ್ತು ಅಲ್ಲದವರನ್ನೆಲ್ಲ ಒಳಗೊಂಡ ಒಂದು ವಿಶಾಲ ವ್ಯಾಪ್ತಿಯ ವೇದಿಕೆ. ದಲಿತರು ಮತ್ತು ದಲಿತೇತರರು ಹೊಸ ಸಂಸ್ಕೃತಿಯ ಹೋರಾಟಕ್ಕಾಗಿ ಒಗ್ಗೂಡಿದ ವೇದಿಕೆ ಬಂಡಾಯ ಎಂಬ ಪದ ಸಾಮೂಹಿಕ ಆಶಯವನ್ನೆ ಕುರಿತದ್ದೇ ಹೊರತು ವ್ಯಕ್ತಿ ಹುಟ್ಟನ್ನಲ್ಲ. ಈ ಕಾರಣದಿಂದಲೇ ಹುಟ್ಟಿನಿಂದ ದಲಿತನಾಗಿದ್ದು, ಪ್ರತಿಗಾಮಿ ಆಶಯಗಳನ್ನ ಅಭಿವ್ಯಕ್ತಿಸಿದ ಸಾಹಿತಿ ಬಂಡಾಯ ಸಾಹಿತ್ಯದ ಪಟ್ಟಿಗೆ ಸೇರುವದಿಲ್ಲ. ಮತ್ತೊಮ್ಮೆ ಸ್ಪಷ್ಟ ಪಡಿಸಬೇಕೆಂದರೆ ಪ್ರತಿಗಾಮಿ ದಲಿತ ಸಾಹಿತಿಗಳೆಲ್ಲ ಬಂಡಾಯ ಸಾಹಿತಿಗಳು, ಬಂಡಾಯ ಸಾಹಿತಿಗಳೆಲ್ಲರೂ ದಲಿತ ಸಾಹಿತಿಗಳಲ್ಲ"

ಈ ಮಾತನ್ನು ಕೇಳಿದ ಕೂಡಲೇ ಆರಂಭದಲ್ಲಿ ಬಂಡಾಯದವರೊಂದಿಗೆ ಇದ್ದ ದಲಿತರು ಅನಂತರ ದಲಿತೇತರ ಬಂಡಾಯ ಸಾಹಿತಿಗಳನ್ನು ಅನುಮಾನದಿಂದಲೇ ಕಾಣುತ್ತಾ ಬಂದರು. ಅವರನ್ನು ಅಸಮಾಧಾನದಿಂದಲೇ ನೋಡುವುದು. ಇನ್ನು ತೀವ್ರವಾಯಿತು. ಹತ್ತು ಮತ್ತು ಹನ್ನೊಂದನೇ ಡಿಸೆಂಬರ್ ಸಾವಿರದ ಒಂಬೈನೂರ ಎಂಬತ್ಮೂರರಲ್ಲಿ ಧಾರವಾಡದಲ್ಲಿ ದಲಿತ ಲೇಖಕರ, ಕಲಾವಿದರ ಬಳಗ ಹುಟ್ಟಿಕೊಂಡಿತು. ಡಿಸೆಂಬರ್ ಇಪ್ಪತ್ಮೂರು, ಸಾವಿರದ ಒಂಬೈನೂರ ಎಂಬತ್ತಾರರಲ್ಲಿ ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ದಲಿತ ಸಾಹಿತ್ಯ ಸಮಾವೇಶವೂ ಜರುಗಿತು ಅಲ್ಲಿ "ಬಂಡಾಯ ಸಾಹಿತ್ಯ ಸತ್ತು

ಹೋಗಿದೆ" ಎಂದು ಅಧಿಕೃತವಾಗಿ ಘೋಷಿಸಲಾಯಿತು. ಈ ಮಧ್ಯೆ ದಲಿತ ಲೇಖಕರಾದ ಅರವಿಂದ ಮಾಲಗತ್ತಿಯವರು ಬಂಡಾಯ ಸಾಹಿತ್ಯದ ಒಂದು ಭಾಗ ದಲಿತ ಸಾಹಿತ್ಯ ಏಕಾಗಬೇಕು? ಯಾಕೆ ದಲಿತ ಸಾಹಿತ್ಯದ ಒಂದು ಭಾಗ ಬಂಡಾಯ ಸಾಹಿತ್ಯ ಆಗಬಾರದು? ಯಾಕೆ ಪ್ರತಿಗಾಮಿ ದಲಿತ ಸಾಹಿತಿಗಳು ಬಂಡಾಯ ಸಾಹಿತಿಗಳಾಗುತ್ತಾರೆ? ಯಾಕಾಗಿ ಬಂಡಾಯ ಸಾಹಿತಿಗಳೆಲ್ಲ ದಲಿತ ಸಾಹಿತಿಗಳಾಗುವದಿಲ್ಲ. ಎಂಬ ಪ್ರಶ್ನೆಗಳನ್ನೂ ಎತ್ತಿದರು, ಬಹುಶಃ ಅರವಿಂದ ಮಾಲಗತ್ತಿಯವರ ಪ್ರಶ್ನೆಗಳು ತುಂಬಾ ಸಮಂಜಸವಾದವುಗಳು, ಅಷ್ಟೇ ಕಟುಸತ್ಯವಾದ ಪ್ರಶ್ನೆಗಳು ನಾನು ಮಾಲಗತ್ತಿಯವರ ವಾದವನ್ನು ಒಪ್ಪತ್ತೇನೆ. ಯಾಕೆ ಬಂಡಾಯ ಸಾಹಿತ್ಯದವರು ದಲಿತರಾಗುವದಿಲ್ಲ ಎಂಬುದು ನನ್ನದೂ ಪ್ರಶ್ನೆಯಾಗಿದೆ. ಹಾಗಿದ್ದರೆ ಅವರೇಕೆ ಜಾತಿ ವಿರೋಧಿ ಹೋರಾಟವನ್ನು ತಮ್ಮ ಬಂಡಾಯ ಸಾಹಿತ್ಯದ ಪ್ರಣಾಳಿಕೆಯಲ್ಲಿ ಸೇರಿಸಿಕೊಳ್ಳಬೇಕಾಗಿತ್ತು? ಇದರರ್ಥ ಬಂಡಾಯ ಸಾಹಿತಿಗಳೂ ಕೂಡ ಜಾತಿಯನ್ನು ರಕ್ಷಿಸಿಕೊಂಡೇ ಬಂದರು ಎಂದು ಅರ್ಥ ಅಲ್ಲವೆ? ಹಾಗಿದ್ದರೆ ಜಾತಿವಿನಾಶ ಯಾವಾಗ, ಬಂಡಾಯಗಾರರ ಈ ನೀತಿ ಅವರು ಅಸ್ಪೃಶ್ಯತೆಯನ್ನು ಜಾತಿಯನ್ನು, ಗುಲಾಮಗಿರಿಯನ್ನು, ತಾತ್ವಿಕವಾಗಿ ಮನದಾಳದಲ್ಲಿ ಒಪ್ಪಿಕೊಂಡಂತೆಯೇ ಎಂದು ಭಾಸವಾಗುವದಿಲ್ಲವೆ? ಹೀಗಾಗಿ ಬಂಡಾಯ ಸಾಹಿತ್ಯ ಸತ್ತು ಹೋಗಿದೆ ಎನ್ನುವ ಮಾತಿನಲ್ಲಿ ಸತ್ಯಾಂಶವಿದೆ.

"ದಲಿತರಿಗೆ ಪೂರ್ವಸಿದ್ದವಾದ ವಿಚಾರವಾದದ ಹಿನ್ನಲೆಯಿಲ್ಲ. ಅವರ ಹೋರಾಟದ ತಂತ್ರ ಮತ್ತು ಕಾರ್ಯಕ್ರಮಗಳು ಇನ್ನು ರೂಪುಗೊಳ್ಳಬೇಕಾದವು. ಆದರೆ ಬಂಡಾಯದವರಿಗೆ ಜೀವನಾನುಭವಗಳನ್ನು ವಿಚಾರವಾದದ ಹಿನ್ನಲೆಯಲ್ಲಿ ವ್ಯಾಖ್ಯಾನಿಸುವ ಬಗ್ಗೆ ಈಗಾಗಲೇ ಗೊತ್ತು" ಎಂದು ವಿಮರ್ಶಕರಾದ ಜಿ.ಎಚ್. ನಾಯಕ ಅವರು ಹೇಳುತ್ತಾರೆ. ಇರಬಹುದು. ಆದರೆ ಜೀವನಾನುಭವಗಳನ್ನು ಕೇವಲ ವಿಚಾರವಾದದ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುವುದು ಮುಖ್ಯ ಅಲ್ಲ. ಜೀವನಾನುಭವಗಳನ್ನು ಕಾರ್ಯರೂಪಕ್ಕೆ ತರುವುದು ತುಂಬಾ ಮುಖ್ಯ. ಅದು ದಲಿತ ಸಾಹಿತ್ಯಕ್ಕೆ ಇದೆ.

ಪುರುಷೋತ್ತಮ ಬಿಳಿಮಲೆ ಅವರು ಹೇಳುವ ಹಾಗೆ "ಈ ಎರಡೂ ಚಳುವಳಿಗಳ ಮಧ್ಯೆ ಚಾರಿತ್ರಿಕವಾದ ಸಮಸ್ಯೆಯೊಂದಿದೆ. ಅಸ್ಪೃಶ್ಯತೆ ಭಾರತದ ವಿಶಿಷ್ಟ ಸಮಸ್ಯೆಯಾದ್ದರಿಂದ ದಲಿತರು ಭಾರತದ ಚೌಕಟ್ಟಿನೊಳಗೆ ಕೆಲಸ ಮಾಡುವುದು ಅನಿವಾರ್ಯವಾಗುತ್ತದೆ. ಆದರೆ ಆರ್ಥಿಕತೆಯ ಬಗ್ಗೆ ಹೆಚ್ಚು ಮಾತನಾಡುವ ದಲಿತೇತರರು ಅದನ್ನು ವಿಶ್ವದ ಸಮಸ್ಯೆ ಎಂದು ಮಾತನಾಡುತ್ತಾರೆ. ತಮ್ಮ ಕಾರ್ಯಕೇತ್ರದಲ್ಲಿನ ಈ ವ್ಯತ್ಯಾಸವನ್ನು ಎರಡೂ ಕಡೆಯವರು ಅರಿತುಕೊಂಡಿದ್ದಾರೆ" ಎಂಬ ಮಾತು ಸರಿ ಏನೋ ಹೌದು. ಅದರೆ ಭಾರತದ ಮೂಲ ಸಮಸ್ಯೆಗಳನ್ನು ಪರಿಹರಿಸಿ ಆಮೇಲೆ ಅಂತರಾಷ್ಟ್ರೀಯ ಸಿದ್ದಾಂತಗಳ ಬಗ್ಗೆ ಗಮನಹರಿಸಿದರೆ ಬಂಡಾಯದ ಆಶಯಗಳು ಬಹುಮಟ್ಟಿಗೆ ಈಡೇರುತ್ತಿದ್ದವೇನೋ. ಹೀಗಾಗಿ ಬಂಡಾಯದ ಧೋರಣೆಗಳು ಕೇವಲ ವಿಚಾರಗಳಾಗಿ ಉಳಿದಿವೇ ವಿನಃ ಅವು ಕಾರ್ಯರೂಪದಲ್ಲಿ ಯಶಸ್ವಿಯಾಗಲಿಲ್ಲ. ಅಸ್ಪೃಶ್ಯತೆ ಹೋಗಲಿಲ್ಲ. ಜಾತಿ ಅಳಿಯಲಿಲ್ಲ. ಲಿಂಗತಾರತಮ್ಯ ಇನ್ನು ಇದೆ. ಶೋಷಣೆ ನಡೆಯುತ್ತಲೇ ಇದೆ. ಇವುಗಳ ಮಧ್ಯ ಬಂಡಾಯ ಸಾಹಿತ್ಯ ತಣ್ಣಗಾಗಿದೆ. ದಲಿತ ಸಾಹಿತ್ಯ ತನ್ನ ಹೋರಾಟ ಮಾಡುತ್ತಲೇ ಇದೆ ಆದರೆ ಫಲ ದೊರಕುತ್ತಲೇ ಇಲ್ಲ.

ಹೀಗಾಗಿ ದಲಿತ ಬಂಡಾಯದ ಪಂಥಗಳಲ್ಲಿ ಅನನ್ಯತೆಗಿಂತ ಭಿನ್ನತೆಯೇ ಹೆಚ್ಚಾಗಿದೆ. ಕೇವಲ ವಿಚಾರ ಸಾಮ್ಯತೆ ಇರಬಹುದು. ಕಾರ್ಯಾಚರಣೆಯಲ್ಲಿ ಎರಡೂ ಭಿನ್ನವಾದವುಗಳೇ ಎಂಬುದು ತಾತ್ವಿಕವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ದಲಿತ ಸಾಹಿತ್ಯ ಸಂಘಟನಾತ್ಮಕ ಶಕ್ತಿಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ. ಸಂಘಟನೆ ಈಚಲ ಮರದಂತೆ ಬೆಳೆಯದೆ ಆಲದ ಮರದಂತೆ ತನ್ನ ಶಾಖೆಗಳನ್ನು ವಿಸ್ತರಿಸುತ್ತಾ ಹೋಗಬೇಕಾಗುತ್ತದೆ. ಈ ಕಾರ್ಯಕ್ಕೆ ಡಾ. ಅಂಬೇಡ್ಕರ್ ಅವರ ಚಿಂತನೆಗಳನ್ನು ಆರಾಧಿಸುವ ಬದಲು ಅನುಸರಿಸುವ ಮತ್ತು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ನಿರ್ವಹಿಸಬೇಕಾಗುತ್ತದೆ. ಡಾ. ಅಂಬೇಡ್ಕರ್ ಚಿಂತನೆಯನ್ನು ಹೋರಾಟದ ಮಾರ್ಗ ಎನ್ನುವುದಕ್ಕಿಂತ ಮುಖ್ಯವಾಗಿ ಬದುಕಿನ ಮಾರ್ಗ ಎಂದು ಅರಿತುಕೊಳ್ಳಬೇಕಾಗಿದೆ.

ದಲಿತ ಸಾಹಿತ್ಯದ ಮುಂದಿನ ಮುಖ್ಯ ಕಾರ್ಯ ಭಾರತದ ಸಂವಿಧಾನವನ್ನು ಉಳಿಸಿಕೊಳ್ಳುವುದು. ಜಾತೀಯತೆಯನ್ನು ನಾಶ ಮಾಡುವುದು. ಅಸ್ಪೃಶ್ಯತೆಯನ್ನು ತೊಲಗಿಸುವುದು, ಲಿಂಗಬೇಧವನ್ನು ಕೊನೆಗಾಣಿಸುವುದು. ಬೌದ್ಧ ಧರ್ಮವನ್ನು ಅನುಸರಿಸುವುದು, ಭೂಮಿಯನ್ನು ರಾಷ್ಟ್ರೀಕರಣಗೊಳಿಸುವುದು. ರಾಜಕೀಯ ಪ್ರಾಬಲ್ಯ ಸಾಧಿಸುವುದು, ರಾಜಕೀಯ ಸಂಘಟನೆಯನ್ನು ಡಾ. ಅಂಬೇಡ್ಕರ್ ಚಿಂತನೆ ಅಡಿಯಲ್ಲಿ ತರುವುದು. ಮಹಿಳಾ ಶಕ್ತಿಯನ್ನು ಕ್ರೋಢೀಕರಿಸುವುದು, ಅವರಲ್ಲಿ ಸಂಘಟನಾತ್ಮಕ ಬಲ ತುಂಬುವುದು. ಮತ್ತು ಅವರ ಸರ್ವಾಂಗೀಣ ಬೆಳವಣಿಗೆಗೆ ಶ್ರಮಿಸುವುದು. ಬಾಬಾ ಸಾಹೇಬರ ಸಿದ್ದಾಂತವನ್ನು ಒಪ್ಪುವ ರಾಜಕೀಯ ಶಕ್ತಿಯನ್ನು ನಿರ್ಮಿಸುವುದು. ದಲಿತ ಧರ್ಮದ ಮಾನ್ಯತೆ, ಹೊಸ ನ್ಯಾಯದ ಪರಿಕಲ್ಪನೆ ರಾಜಕೀಯ ಮೀಸಲಾತಿ, ದಲಿತರು ಕಳೆದುಕೊಂಡ ಭೂಮಿಯ ಪುನರ್ ಸ್ವಾಧೀನ, ದಲಿತರ ಉದ್ಯೋಗದ ಗ್ಯಾರಂಟಿ, ಎಲ್ಲ ಅಂಶಗಳ ಮೇಲೆ ದಲಿತ ಸಾಹಿತ್ಯ ಗಮನಹರಿಸಬೇಕಾಗುತ್ತದೆ.

ಈ ಎಲ್ಲವೂಗಳಿಗೂ ಮುಖ್ಯವಾಗಿ ಆರ್ಥಿಕ ಸಮಾನತೆ ಈ ದೇಶದಲ್ಲಿ ಬರಬೇಕಾದ ಅನಿವಾರ್ಯತೆ ಇದೆ. ಆಸ್ತಿಯ ಸಮಾನ ಹಂಚಿಕೆ ಕುರಿತಾದ ವಿಚಾರವೂ ಕೂಡಾ ದಲಿತ ಸಾಹಿತ್ಯ ಪ್ರತಿಪಾದಿಸಬೇಕಾಗುತ್ತದೆ. ಸದೃಢ ಸಮಾಜದ ನಿರ್ಮಾಣಕ್ಕೆ, ದೇಶದ ಪ್ರಗತಿಗೆ ಸಾಮಾಜಿಕ ಸಮಾನತೆಗೆ ಮುಖ್ಯವಾದದ್ದೆಂದರೆ ಆಸ್ತಿಯ ಸಮಾನ ಹಂಚಿಕೆ ಮತ್ತು ಆರ್ಥಿಕ ಸಮಾನತೆ ಇದು ದಲಿತ ಸಾಹಿತ್ಯದ ಧ್ಯೇಯವಾಗಬೇಕು.

## ಆಕರ ಗ್ರಂಥಗಳು


1. ದಲಿತ ಅಧ್ಯಯನ – ಸಂ. ಡಾ. ಡಿ.ಆರ್. ಚಂದ್ರಶೇಖರ.
2. ದಲಿತ ಚಳುವಳಿ – ಡಾ. ಸಣ್ಣರಾಮ
3. ಬಂಡಾಯ–ದಲಿತ ಸಾಹಿತ್ಯ – ಡಾ. ಪುರುಷೋತ್ತಮ ಬಿಳಿಮಲೆ
4. ದಲಿತ ಚಿಂತನೆ – ಸಂ. ಮೊಗಳ್ಳಿ ಗಣೇಶ
5. ದಲಿತ ಸಾಹಿತ್ಯ ಸಮೀಕ್ಷೆ – ಡಾ. ವಿ. ಮುನಿವೆಂಕಟಪ್ಪ